1415 (1438) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸಂಘ–ಸಂಸ್ಥೆ ನೋಂದಣಿ ಕಾಯ್ದೆ 1960 ರಡಿ ಯಲ್ಲಿ ನೋಂದಣಿಯಾದ ಶೈಕ್ಷಣಿಕ ಸಂಘ–ಸಂಸ್ಥೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುತ್ತಿದೆಯೇ,

ಆ) ಪ್ರಕಟಿಸಲಾಗುತ್ತಿದ್ದರೆ, ಪ್ರಕಟವಾದ ರಾಜ್ಯ ಪತ್ರದ ದಿನಾಂಕ ಹಾಗೂ ಅದರಲ್ಲಿ ನಮೂದಿತವಾಗಿರುವ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ನೀಡುವುದು,

ಇ) ಪ್ರಕಟಿಸಿಲ್ಲದಿದ್ದರೆ, ಅದಕ್ಕಿರುವ ಕಾರಣಗಳೇನು,

ಈ) ನೋಂದಣಿಯಾದ ಶೈಕ್ಷಣಿಕ ಸಂಘ–ಸಂಸ್ಥೆಗಳನ್ನು ಲೋಕಾಯುಕ್ತ ಹಾಗೂ ಮಾಹಿತಿ ಹಕ್ಕು ಶಾಸನ – 2005 ರ ವ್ಯಾಪ್ತಿಗೆ ಸೇರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರಡಿ ನೋಂದಣಿಯಾದ ಶೈಕ್ಷಣಿಕ ಸಂಘ ಸಂಸ್ಥೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವುದಿಲ್ಲ

ಆ) ಅನ್ವಯಿಸುವುದಿಲ್ಲ

ಇ) ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರಡಿ ಪ್ರಕಟಣೆ ಮಾಡಲು ಅವಕಾಶವಿರುವುದಿಲ್ಲ

ಈ) ಲೋಕಾಯುಕ್ತ ಕಾಯ್ದೆ 1984 ಹಾಗೂ ಮಾಹಿತಿ ಹಕ್ಕು ಕಾಯ್ದೆ 2005 ರ ಉಪಬಂಧಗಳನ್ನು ಹಾಗೂ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾಪನೆಯನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು

1416 (1439) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?